ಅಭಿನಯದ ಪಟ್ಟುಗಳನ್ನು ಕಲಿತವರು ಇರ್ಫಾನ್. ಸಿನಿಮಾದಲ್ಲಿ ಒಂದೂಮುಕ್ಕಾಲು ದಶಕದಲ್ಲೇ ದೊಡ್ಡ ಹೆಸರು ಮಾಡಿದರೂ ಅವರಿಗೆ ಬೇರುಗಳನ್ನು ಕುರಿತು ಒಳತೋಟಿ ಇತ್ತು. ಅದಕ್ಕೇ ಕನ್ನಡದ ರಂಗಕರ್ಮಿ 'ದೇಸಿ' ಪ್ರಸನ್ನ ಅವರಿಂದ ನಾಟಕ ಬರೆಸಿ, ಅಭಿನಯಿಸುವ ಕಕ್ಕುಲಾತಿಯನ್ನು ಅವರು ವ್ಯಕ್ತಪಡಿಸಿದ್ದು. ಇಲ್ಲೆಲ್ಲೋ ಪ್ರಸನ್ನ ಉಪವಾಸ ಕೂತರೆ, ದೂರದಿಂದಲೇ ಹೋರಾಟಕ್ಕೆ ಬೆಂಬಲದ ಮುದ್ರೆಯೊತ್ತಿದ್ದು. ತಂತಾನೇ ಇಲ್ಲಿನ ಚಳವಳಿಕಾರರ ಬ್ಯಾಂಕ್ ಖಾತೆಗೆ ಕೈಲಾದಷ್ಟು ಹಣವನ್ನು ವರ್ಗಾವಣೆ ಮಾಡಿ ಸುಮ್ಮನಾದದ್ದು.

ರಂಗಭೂಮಿಯ ಅನುಭವ ಬೆನ್ನಿಗಿಕ್ಕಿಕೊಂಡು ಹೊರಬಂದಮೇಲೆ ಇರ್ಫಾನ್ ಕಿರುತೆರೆಯಲ್ಲಿ ಸಣ್ಣಪುಟ್ಟ ಪಾತ್ರಗಳನ್ನು ನಿರ್ವಹಿಸಲು ಒಲ್ಲೆ ಎನ್ನಲಿಲ್ಲ. 'ಚಂದ್ರಕಾಂತ', 'ಚಾಣಕ್ಯ' ತರಹದ ಧಾರಾವಾಹಿಗಳಲ್ಲಿ ಅವರು ಯಾವ ಪಾತ್ರದಲ್ಲಿ ನಟಿಸಿದ್ದರು ಎನ್ನುವುದನ್ನು ಮರೆತವರೇ ಹೆಚ್ಚು. ಟೋನಿ ಹಾಗೂ ದಿಯಾ ಸಿಂಗ್ ಧಾರಾವಾಹಿ ಎಂದೇ ಜನಜನಿತವಾಗಿದ್ದ 'ಬನೇಗಿ ಅಪ್ನಿ ಬಾತ್' ಮೂಲಕ ಗುರುತಾದರಾದರೂ ಒಂದು ದಶಕ ಅವರು ಎಷ್ಟೆಲ್ಲ ಸೈಕಲ್ ಹೊಡೆದಿದ್ದರು ಎನ್ನುವುದನ್ನು ಅವರಷ್ಟೇ ಕಷ್ಟಪಟ್ಟಿದ್ದ ನವಾಜುದ್ದೀನ್ ಸಿದ್ದಿಕಿ ಅವರಂಥವರಿಗೆ ಚೆನ್ನಾಗಿ ಗೊತ್ತು.

ಅಸಿಫಾ ಕಪಾಡಿಯಾ 2001ರಲ್ಲಿ 'ದಿ ವಾರಿಯರ್' ಸಿನಿಮಾ ನಿರ್ದೇಶಿಸಿದರು. ಅದಾಗಲೇ ಇರ್ಫಾನ್ ಅಭಿನಯಕೌಶಲವನ್ನು ಅವರು ಮುಕ್ತಕಂಠದಿಂದ ಹೊಗಳಿದ್ದರು. 'ಇವನು ಬೆನಿಸಿಯೊ ಡೆಲ್ ಟೊರೊ, ಗ್ಯಾರಿ ಓಲ್ಡ್‌ಮನ್, ವಿನ್ಸೆಂಟ್ ಗ್ಯಾಲೊ ತರಹದ ನಟ. ತನಗೇನು ಬೇಕೋ ಅದನ್ನು ಮಾಡಬಲ್ಲ. ಅವನು ಎಷ್ಟು ಎತ್ತರಕ್ಕೆ ಹಾರುತ್ತಾನೆ ನೋಡುತ್ತಿರಿ' ಎಂದು ಅವರು ಹೇಳಿ ಹದಿನೆಂಟು ವರ್ಷಗಳಾದವು. ಆದರೆ, ಇರ್ಫಾನ್ ಯಾರ ಕೈಗೂ ಸಿಗಲಾರದಷ್ಟು ಎತ್ತರಕ್ಕೆ ಹಾರಿಬಿಡುತ್ತಾರೆ ಎಂದು ಯಾರು ತಾನೆ ಅಂದುಕೊಂಡಿದ್ದರು?

ಇರ್ಫಾನ್ ಹಿಂದಿ ಚಿತ್ರರಂಗದ ಪಥ್ಯದಲ್ಲಿನ ಸಿದ್ಧಮಾದರಿ ಆಗಲೇ ಇಲ್ಲ. ಅವರೊಂದು ಬಗೆಯಲ್ಲಿ ಪರ್ಯಾಯ ಹೀರೊ. 'ಹಿತಮಿತವೇ ಗಮ್ಮತ್ತು' ಎಂಬಂಥ ಧೋರಣೆಯನ್ನು ನಟನೆಯಲ್ಲಿ ಕಾಣಿಸಿದವರು. ಬಾಲಿವುಡ್‌ನಂಥ ವಾಚಾಳಿ ಮಾಧ್ಯಮವು ಜೈಪುರದ ಈ ತಣ್ಣಗಿನ ಪ್ರತಿಭೆಯನ್ನು ದಮನ ಮಾಡದೇ ಇರುತ್ತದೆಯೇ ಎಂದು ಅದೆಷ್ಟೋ ರಂಗಕರ್ಮಿಗಳು ಆತಂಕದ ನೋಟ ಬೀರಿದ್ದುಂಟು. ಆ್ಯಂಗ್ ಲೀ, ಮೈಕಲ್ ವಿಂಟರ್ ಬಾಟಮ್, ಡ್ಯಾನಿ ಬಾಯ್ಲ್ ತರಹದ ಪಶ್ಚಿಮದ ನಿರ್ದೇಶಕರು ಹಿಡಿದ ಕ್ಯಾಮೆರಾಗಳ ಮುಂದೆಯೂ ನಿಂತು ಬಂದವರು ಇರ್ಫಾನ್.

1988ರಲ್ಲಿ ಮೀರಾ ನಾಯರ್ ನಿರ್ದೇಶನದ 'ಸಲಾಂ ಬಾಂಬೆ' ಚಿತ್ರದಲ್ಲಿ ಮಾಡಿದ ಸಣ್ಣ ಪಾತ್ರವೂ ಎಡಿಟಿಂಗ್ ಟೇಬಲ್‌ನಲ್ಲಿ ಅಳಿಸಿಹೋದಾಗ ಇರ್ಫಾನ್ ದೊಡ್ಡ ಕಣ್ಣುಗಳೊಳಗೆ ಅದ್ಯಾವ ಭಾವ ಸೇರಿಕೊಂಡಿತ್ತೋ. ತಿಗ್ಮಾಂಶು ಧುಲಿಯಾ ನಿರ್ದೇಶನದ 'ಹಾಸಿಲ್', ವಿಶಾಲ್ ಭಾರದ್ವಾಜ್ ನಿರ್ದೇಶಿಸಿದ 'ಮಕ್ಬೂಲ್' ಹಾಗೂ ಮೀರಾ ನಾಯರ್ ತಯಾರಿಸಿದ 'ದಿ ನೇಮ್ ಸೇಕ್' ಚಿತ್ರಗಳಲ್ಲಿ ಸಿಕ್ಕ ಪಾತ್ರಗಳಲ್ಲೇ ಅವರು ಪ್ರೇಕ್ಷಕರು ತಮ್ಮ ಮೇಲೆ ಕಣ್ಣು ಕೀಲಿಸುವಂತೆ ಮಾಡಿದರು. 2012ರಲ್ಲಿ ತೆರೆಕಂಡ 'ಪಾನ್ ಸಿಂಗ್ ತೋಮರ್' ಹಿಂದಿ ಸಿನಿಮಾದಲ್ಲಿ ಸ್ಟೀಪಲ್ ಚೇಸ್ ಚಾಂಪಿಯನ್ ಆಗಿದ್ದವನು ಡಕಾಯಿತಿಗಿಳಿಯುವ ಪಾತ್ರದಲ್ಲಿ ಅವರು ಕಾಣಿಸಿಕೊಂಡರು. ಬಲ, ಛಲ, ಧೈರ್ಯ, ಹಾಸ್ಯ ಇವೆಲ್ಲವುಗಳನ್ನೂ ಪ್ರಕಟಪಡಿಸಬೇಕಾಗಿದ್ದ ಆ ಪಾತ್ರ ಇರ್ಫಾನ್ ವೃತ್ತಿಬದುಕಿಗೆ ಇಂಧನ. ಅದರ ಅಭಿನಯಕ್ಕೆ ರಾಷ್ಟ್ರಪ್ರಶಸ್ತಿ ಸಂದಿದ್ದು ಅರ್ಥಪೂರ್ಣ.

ಇರ್ಫಾನ್ ಮೌನ ಪ್ರಭಾವಿ. ಸಂಭಾಷಣೆಯ ನಡುವಿನ ಅಲ್ಪವಿರಾಮ, ಪ್ರತಿಕ್ರಿಯಾತ್ಮಕ ನೋಟ, ಅಂತಃಶೋಧಕ್ಕೆ ಇಳಿದಂತೆ ಮಾತು ತುಳುಕಿಸುವ ರೀತಿ ಅವರನ್ನು ಕಾಡುವ ನಟನನ್ನಾಗಿ ಮಾಡಿದವು. ರಿತೇಶ್ ಬಾತ್ರಾ ನಿರ್ದೇಶಿಸಿದ 'ದಿ ಲಂಚ್ ಬಾಕ್ಸ್'


'ಪಾನ್‌ಸಿಂಗ್ ತೋಮರ್'
ಚಿತ್ರದಲ್ಲಿ ಇರ್ಫಾನ್ ಖಾನ್

ಸಿನಿಮಾದಲ್ಲಿ ಸರ್ಕಾರಿ ಕೆಲಸಗಾರನೂ, ವಿಧುರನೂ ಆಗಿ ಅವರು ಮುಗ್ಧ ಪ್ರೇಮಭಾವ ವ್ಯಕ್ತಪಡಿಸಿದ ರೀತಿ ಬೆರಗು ಮೂಡಿಸಿತ್ತು. 'ತಲ್ವಾರ್'ನಲ್ಲಿ ಅಶ್ವಿನ್ ಕುಮಾರ್ ಎಂಬ ಪೊಲೀಸ್ ಅಧಿಕಾರಿ ಪಾತ್ರಕ್ಕೂ ಕಾಮಿಕ್ ರಿಲೀಫ್ ನ ಚುಚ್ಚುಮದ್ದು ಕೊಟ್ಟ ರೀತಿ ಅನನ್ಯ. 'ಪೀಕು' ಹಿಂದಿ ಸಿನಿಮಾದಲ್ಲಿ ಅಮಿತಾಭ್ ಬಚ್ಚನ್, ದೀಪಿಕಾ ಪಡುಕೋಣೆ ತರಹದ ಜನಪ್ರಿಯರ ಎದುರು ತಮ್ಮತನದ ತಣ್ಣಗಿನ ವ್ಯಂಗ್ಯತುಂಟತನ ಬೆರೆತ ಮಾತು ತೇಲಿಬಿಟ್ಟ ರೀತಿಯಲ್ಲೇ ಅವರ ರುಜುವಿದೆ. ಅದೇ ಪಾತ್ರದಲ್ಲಿ ಅವರು ಕಣ್ಣಿನಲ್ಲೇ ದೀಪಿಕಾ ಅವರನ್ನು ಪ್ರೇಮಿಸುವ ಪರಿಯಲ್ಲಿ ಹರೆಯದ ಮುಕ್ಕಣ್ಣಗಳಿಗೂ ಪಾಠವಿದೆ. 'ಕರೀಬ್ ಕರೀಬ್ ಸಿಂಗಲ್' ಚಿತ್ರದಲ್ಲಿ ಪಾರ್ವತಿ ಮೆನನ್ ಜತೆಗೆ ಮಧ್ಯಮವಯಸ್ಕ ಪ್ರೇಮಪ್ರಸಂಗಕ್ಕೆ ಹಾಸ್ಯದ ಅಂಗಿ ತೊಡಿಸಿದ ಬಗೆ ಕೂಡ ವಿಶಿಷ್ಟವಾದದ್ದು.

'ಕಾರವಾನ್' ಸಿನಿಮಾದಲ್ಲಿ ಒಂದು ಅಣಕು ಸಾಹಸದ ದೃಶ್ಯವಿದೆ. ಜನಪ್ರಿಯ ಸಿನಿಮಾ ನಾಯಕರು ಗೂಂಡಾಗಳ ತದುಕುವುದನ್ನು ನಾವು ನೋಡಿದ್ದೇವೆ. ಆ ಸಿನಿಮಾದಲ್ಲಿ ಇರ್ಫಾನ್ ನಗು ತರಿಸುವ ಮೂಲಕ ಪ್ರೇಕ್ಷಕರೆದೆಗೆ ಹಿತವಾದ ಗುದ್ದು ಕೊಟ್ಟರು. 'ಲೈಫ್ ಇನ್ ಎ ಮೆಟ್ರೊ'ದಲ್ಲಿ ಕೊಂಕಣಾ ಸೇನ್ ಶರ್ಮಗೆ ಒಲ್ಲದ ಪತಿಯಾಗಿ ಅವರು ಹೇಗೆ ಕಾಡಿದ್ದರೆನ್ನುವುದನ್ನು ಮರೆಯಲು ಸಾಧ್ಯವಿಲ್ಲ. 'ಹಿಂದಿ ಮೀಡಿಯಂ', 'ಅಂಗ್ರೇಜಿ ಮೀಡಿಯಂ' ಕೂಡ ಹಲವು ಭಾವಗಳನ್ನು ತುಳುಕಿಸುವಂಥ ಪಾತ್ರಗಳನ್ನು ಇರ್ಫಾನ್ ಅವರಿಗೆ ಒದಗಿಸಿಕೊಟ್ಟವು.

'ದಿ ಅಮೇಜಿಂಗ್ ಸ್ಪೈಡರ್ ಮ್ಯಾನ್', 'ಲೈಫ್ ಆಫ್ ಪೈ', 'ಜುರಾಸಿಕ್ ವರ್ಲ್ಡ್', 'ಇನ್ಫರ್ನೊ', 'ಸ್ಲಂ ಡಾಗ್ ಮಿಲಿಯನೇರ್' ಇವೆಲ್ಲವೂ ಪಶ್ಚಿಮದತ್ತಲೂ ಅವರು ಕೈಚಾಚಿ ಗೆದ್ದದ್ದಕ್ಕೆ ಸಾಕ್ಷ್ಯಗಳು.

ನ್ಯೂರೊ ಎಂಡೋಕ್ರೈನ್ ಟ್ಯೂಮರ್ ಇದೆ ಎಂದು 2018ರಲ್ಲಿ ಮೊದಲು ಬಯಾಪ್ಸಿಯಿಂದ ಗೊತ್ತಾದಾಗ ಇರ್ಫಾನ್ ಸಹಜವಾಗಿಯೇ ಕಳವಳಗೊಂಡಿದ್ದರು. ಅವರ ಹೆಂಡತಿ ಸುತಾಪಾ ಜತೆಗೂಡಿ ಆಗಲೂ ಸ್ಕ್ರಿಪ್ಟ್‌ಗಳನ್ನು ಓದುವ ಸುಖವುಂಡದ್ದು ಅವರ ಅಧ್ಯಾತ್ಮ. ಆಸ್ಪತ್ರೆಯ ಕಿಟಕಿಯಿಂದ ಅಲ್ಲೇ ಇದ್ದ ಲಾರ್ಡ್ಸ್ ಕ್ರೀಡಾಂಗಣದತ್ತ ಇಣುಕಿ, ಬದುಕು ತಂದೊಡ್ಡಿದ ಸವಾಲು–ಜೀವನ ದರ್ಶನ–ಹೋರಾಟವನ್ನು ಅವರು ಭಾವತೀವ್ರತೆಯ ಮಾತುಗಳಿಂದ ಬರೆದಿದ್ದು. ಆ ನುಡಿಸಂಕಟ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಇರ್ಫಾನ್ ತಣ್ಣಗೆ ಮಾತಾಡುವುದನ್ನು ನೋಡುವಾಗಲೆಲ್ಲ ಸಂಜೀವ್ ಕುಮಾರ್ ಪಲುಕೊಂದು ನೆನಪಾಗುತ್ತಿತ್ತು. ಸಚಿನ್ ತೆಂಡೂಲ್ಕರ್, ರೋಹಿತ್ ಶರ್ಮ ಮುದ್ದುಮುಖವನ್ನು ತೋರಿಸಿ ಎದುರಾಳಿ ಬೌಲರ್‌ಗಳನ್ನು ಚಿಂದಿ ಮಾಡುವರಲ್ಲ; ಅಂತಹುದೇ ಪಲುಕು ಅದು.

ನೋಟದ ಮೂಲಕ ನಟನೆಯ ತಂತಿ ಮೀಟಿದ ಮಾನಸಿಕ ಗುರು ನಾಸಿರುದ್ದೀನ್ ಶಾ ಅವರಂತೆಯೇ ಇರ್ಫಾನ್ ಕಾಡುತ್ತಲೇ ಇರುತ್ತಾರೆ. ಟೈರ್ ಅಂಗಡಿ ನಡೆಸುವ ಕುಟುಂಬದ ಹುಡುಗನೊಬ್ಬ ತನ್ನದೇ ಅಭಿನಯದ ಹೆದ್ದಾರಿ ನಿರ್ಮಿಸಿ ಎದ್ದು ಹೊರಟಿದ್ದು ಕೂಡ ಕಾಡುವ ಕಥನ; ಅದೂ ತನ್ನ ತಾಯಿ ಕಣ್ಮುಚ್ಚಿದ ನಾಲ್ಕೇ ದಿನಕ್ಕೆ ಅವರ ಹಾದಿಯಲ್ಲಿ. ■